**ಸಾಕ್ಷಿಯನ್ನು ದಿಃ 09-07-2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ನಂ. 2 ಮತ್ತು 3 ರವರ ಪರ ಶ್ರೀ ಎಮ್ ಎ ಪಿ ವಕೀಲರಿಂದ**

1) ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ ನಂ. 2 ಮತ್ತು 3 ಇವರಿಗೆ ನಾನು ನಮ್ಮ ನ್ಯಾಯವಾದಿಗಳ ಮೂಲಕ ಒಂದು ನೋಟೀಸು ನೀಡಿದ್ದು ಇತ್ತು ಎಂದರೆ ಸರಿ. ಸದರಿ ನೋಟೀಸಿನಲ್ಲಿ ನಾನು ಅವರು ನನಗೆ ಕೃಷಿ ಚಟುವಟಿಕೆಯಲ್ಲಿ ಹರಕತ್ತು ಮಾಡುತ್ತಿದಾರೆ ಎಂದು ನಮೂದಿಸಿದ್ದು ಇತ್ತು ಎಂದರೆ ಸರಿ. ಸದರಿ ನೊಟೀಸಿಗೆ ಜಿ. ಪಿ. ಕೋಳಿವಾಡ ಇವರು ಸರ್ವೇ ನಂ. 21/2 ರಲ್ಲಿ 4 ಎಕರೆ 10 ಗುಂಟೆ ದಿಃ 27-04-2015 ರಿಂದ 27-04-2017 ರವರೆಗೆ ಕಬ್ಜಾವತ್ತಿ ನೀಡಿರುತ್ತಾರೆ ಎಂಬುದಾಗಿ ಬರೆದಿರುತ್ತಾರೆ ಎಂದರೆ ಸರಿ. ದಿಃ 27-04-2017 ರಂದು ಕಬ್ಜಾವತ್ತಿ ಅವಧಿ ಮುಗಿದ ನಂತರ ಅವರಿಗೆ ಕಬ್ಜೆ ಮುಂದುವರೆಸುವ ಇಚ್ಚೆ ಇರುವುದಿಲ್ಲ ಆದ್ದರಿಂದ ನನಗೆ ನೀಡಿದ 2 ಲಕ್ಷ 10 ಸಾವಿರ ರೂಪಾಯಿಗಳನ್ನು ಮರಳಿ ನೀಡಬೇಕು ಎಂಬುದಾಗಿ ಹೇಳಿರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇರದೇ ಇದ್ದರೂ ಸಹ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಶ್ರೀ ಜಿ.ಪಿ.ಕೋಳಿವಾಡ ವಕೀಲರು ನೀಡಿದ ಪ್ರತ್ಯುತ್ತರ ನೊಟೀಸನ್ನು ಉದ್ದೇಶ ಪೂರ್ವಕವಾಗಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಪತ್ಯುತ್ತರ ಪ್ರತಿಯನ್ನು ತೋರಿಸಿದ್ದು ಅದನ್ನು ಒಪ್ಪಿಕೊಳ್ಳುತ್ತಿದ್ದು ಕಾರಣ ಪ್ರತ್ಯುತ್ತರ ಪ್ರತಿಯನ್ನು ಸಾಕ್ಷದಲ್ಲಿ ಗುರುತಿಸುವಿಕೆಯ ಕುರಿತು ಅದನ್ನು **ನಿಬಿ-1** ಎಂದು ಗುರುತಿಸಲಾಯಿತು. ನಿಬಿ-1 ರಂತೆ ನಾವು 4 ಎಕರೆ 10 ಗುಂಟೆ ಜಮಿನನ್ನು ಪ್ರತಿವಾದಿ ನಂ. 2 ಮತ್ತು 3 ಇವರಿಗೆ ಕಬ್ಜಾವತ್ತಿ ನೀಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ರಾಜೇಶ್ವರಿ ನನ್ನ ಅಕ್ಕ ಇರುತ್ತಾಳೆ. ನನ್ನ ಅಕ್ಕನ ಮದುವೆಯ ಕುರಿತು ಹಣಕಾಸಿನ ತೊಂದರೆ ಉಂಟಾಗಿತ್ತು ಎಂದರೆ ಸರಿಯಲ್ಲ. ಮಲ್ಲಿಕಾರ್ಜುನಪ್ಪ , ಕರಬಸಪ್ಪ ನನ್ನ ಸಂಬಂಧಿಕರು ಎಂದರೆ ಸರಿ. ನಾವು ಅವರಿಗೆ ಹಣದ ಅವಶ್ಯಕತೆ ಇದಿದ್ದರಿಂದ ಕಬ್ಜಾವತ್ತಿ ಸಲುವಾಗಿ ಜಮೀನನ್ನು 2 ಲಕ್ಷ 15 ಸಾವಿರ ಹಾಗೂ 2 ಲಕ್ಷ 20 ಸಾವಿರ ರೂಪಾಯಿಗಳಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಈ ದಾವೆಯಲ್ಲಿ ಉದ್ದೇಶ ಪೂರ್ವಕವಾಗಿ ಮುಚ್ಚಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ದಿಃ 24-07-2015 ರಿಂದ 24-07-2017

ರವರೆಗೆ ದಾವಾ ಜಮೀನುಗಳ ಕಬ್ಜೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ನನ್ನ ಅಜ್ಜ ಇರುತ್ತಾರೆ. ನನ್ನ ತಾಯಿ ಪ್ರತಿವಾದಿಗೆ 2 ವರ್ಷದ ಅವಧಿಗೆ 4 ಎಕರೆ 10 ಗುಂಟೆ ಜಮೀನನ್ನು ಕಬ್ಜಾವತ್ತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2 ಲಕ್ಷ 15 ಸಾವಿರ ಹಣ ಅವರಿಗೆ ಮರಳಿ ನೀಡುವ ತನಕ ಪ್ರತಿವಾದಿಯರಿಗೆ ದಾವಾ ಜಮೀನಿನ ಮೇಲೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಹಣ ಮರಳಿ ನೀಡುವ ತನಕ ಜಮೀನನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಹೊಲದಲ್ಲಿ ಬೆಳೆಯುವ ಪೀಕಗಳನ್ನು ಕಾಲಕಾಲಕ್ಕೆ ನೀವೇ ಪಡೆದುಕೊಳ್ಳಬೇಕು ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಸ್ವತಃ ಚಾಪಾ ಕಾಗದ ಓಂ ಸಾಯಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯಿಂದ ರೂ. 100/- ಚಾಪಾ ಕಾಗದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಮ್ ಸಿ ನರೇಗಲ್ಲ ಮತ್ತು ಎಮ್ ಡಿ ಮರಿಗೌಡರ ಇವರು ನಮ್ಮ ಊರಿನವರೇ ಎಂದರೆ ಸರಿಯಲ್ಲ. ಸಾಕ್ಷಿ ಅವರು ರೊಟ್ಟಿಗವಾಡ ಗ್ರಾಮದವರು ಎಂದು ಸ್ವತಃ ನುಡಿಯುತ್ತಾರೆ.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆಯ ಅವಧಿ ಮುಕ್ತಾಯವಾಗಿದ್ದು ಮುಂದುವರೆದು ಪಾಟೀ ಸವಾಲನ್ನು ಮಧ್ಯಾಹ್ನ 3.00 ಗಂಟೆಗೆ ಮೂಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**

**ಸಾಕ್ಷಿಯನ್ನು ಮಧ್ಯಾಹ್ನ 3.00 ಗಂಟೆಗೆ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ನಂ. 2 ಮತ್ತು 3 ರವರ ಪರ ಶ್ರೀ ಎಮ್ ಎ ಪಿ ವಕೀಲರಿಂದ**

1) ನನಗೆ ಈ ದಾವೆಯಲ್ಲಿ ಪ್ರತ್ಯುತ್ತರ ನೋಟೀಸಿನ ಪ್ರತಿಯನ್ನು ಹಾಜರು ಪಡಿಸಲು ಅನಿಸಿತ್ತು. ಹಾಗೆ ಯಾಕೆ ಹಾಜರು ಪಡಿಸಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತ್ಯುತ್ತರದಲ್ಲಿ ಇದು ಹಣಕಾಸಿನ ವ್ಯವಹಾರ ಇದ್ದು ಏನೂ ಹರಕತ್ತು ಮಾಡುವುದಿಲ್ಲ ಎಂದು ಹೇಳಿದ್ದು ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿ ನಂ. 1 ಇವರಿಗೆ ಕಬ್ಜಾವತ್ತಿ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಎಮ್ ಸಿ ನರೆಗಲ್ಲ , ಎಮ್ ಡಿ ಮರಿಗೌಡರ ಮತ್ತು ಎಮ್ ಎಸ್ ನರೆಗಲ್ಲ ರವರು ನನ್ನ ಸಂಬಂಧಿಕರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಸಂಬಂಧಿಕರು ಎಂದರೆ ಸರಿ. ನಾನು ಪಿಯುಸಿ ವರೆಗೆ ಶಾಲೆ ಕಲಿತಿರುತ್ತೇನೆ. ನಾನು ಯಾವುದೇ ಕೆಲಸ ಮಾಡುವುದಿಲ್ಲ. ನಾನು ಗದಗ ರಹವಾಸಿ ಇರುತ್ತೇನೆ. ನಾನು ವಾದಿ ನಂ. 2 ಇವರ ಬಾಡಿಗೆ ಮನೆಯಲ್ಲಿ ವಾಸ ಇರುತ್ತೇನೆ. ಸದರಿ ವಾದಿ ನಂ. 2 ಕೆ.ಎಸ್.ಆರ್.ಟಿ.ಸಿ. ಇಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಮ್ಮ ಮನೆತನದ ಎಲ್ಲ ಆಗು ಹೋಗುಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ಶೇತ್ಕಿ ಜಮೀನು , ಮನೆ ಮತ್ತು ಖುಲ್ಲಾ ಜಾಗೆ ಇರುತ್ತವೆ ಎಂದರೆ ಸರಿ. ಶೇತ್ಕಿ ಜಮೀನುಗಳು ನನ್ನ ತಾಯಿಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನನ್ನ ತಾಯಿ ಶಾಲೆ ಕಲಿತಿಲ್ಲ ಎಂದರೆ ಸರಿ. ನನ್ನ ತಾಯಿ ಹೆಬ್ಬಟ್ಟಿನ ಗುರುತಿನ ಸಹಿ ಮಾಡುತ್ತಾರೆ ಎಂದರೆ ಸರಿ.

**ಪ್ರತಿವಾದಿ ನಂ. 2 ಮತ್ತು 3 ಪರ ವಕೀಲರು ಕಾಗದ ಪತ್ರ ಹಾಜರು ಪಡಿಸುವುದಾಗಿ ವಾದ ಮಂಡಿಸಿ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ ಗದಗ